ಆ) ನಿರ್ಮಾಣ ಮಾಡಿದಾಗಿನಿಂದ 3 ಬಾರಿ ಟೆಂಡರ್/ ಹರಾಜು ಹಾಗೂ 6 ಬಾರಿ ಸಂದಾನಕ್ಕಾಗಿ ಪ್ರಕಟಣೆಗಳನ್ನು ನೀಡಲಾಗಿತ್ತು. ಆದರೆ ಆಸಕ್ತದಾರರಿಂದ ಉತ್ತಮ ಪ್ರತಿಕ್ರಿಯೆ ಬಂದಿರುವುದಿಲ್ಲ. ಸಂದಾನ ಮೂಲಕ ಮಳಿಗೆ ಸಂ. 5 ಮತ್ತು 8 ನ್ನು ಮಾತ್ರ ಒಂದು ಬಾರಿಗೆ ಬಾಡಿಗೆಗೆ ನೀಡಲಾಗಿದೆ.

ಇ) ವಾಣಿಜ್ಯ ಮಳಿಗೆ ಸಂ. 5 ಹಾಗೂ 8 ರಿಂದ ಒಟ್ಟು 27,424.00 ರೂ.ಗಳು ಮತ್ತು ಕಲ್ಯಾಣಮಂಟಪದಿಂದ 1,69,200.00 ರೂ.ಗಳ ಆದಾಯ ಬಂದಿರುತ್ತದೆ.

ಈ) ಉಳಿದ ಮಳಿಗೆಗಳನ್ನು ನಡೆಸಲು ಯಾವುದೇ ಆಸಕ್ತದಾರರು ಮುಂದೆ ಬರದೆ ಇರುವುದರಿಂದ ಸದರಿ ಮಳಿಗೆಗಳು ಖಾಲಿ ಇರುತ್ತವೆ.

ಉ) (ಈ) ಪ್ರಶ್ನೆಯ ಉತ್ತರದಿಂದ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗುವುದಿಲ್ಲ.

ಊ) ದಿನಾಂಕ : 9–02–2007 ರಂದು ಟೆಂಡರು ಕರೆಯಲಾಗಿದ್ದು ಮಳಿಗೆಗಳನ್ನು ಗುತ್ತಿಗೆ ಮೇಲೆ ನೀಡಲು ಕ್ರಮ ಕೈಗೊಳ್ಳಲಾಗುತ್ತದೆ.

1914 (2490) ಶ್ರೀ ಗಡ್ಡದೇವರ ಮಠ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಿವೃತ್ತ ಸಿಬ್ಬಂದಿ ಸಂಖ್ಯೆ ಎಷ್ಟು;

ಆ) ನಿವೃತ್ತಿ ಹೊಂದಿದ ಸಿಬ್ಬಂದಿಗೆ ಕೆ.ಎಸ್.ಆರ್.ಟಿ.ಸಿ. ಯಿಂದ ಇದುವರೆಗೂ ಲಭ್ಯ ಮಾಡಿದ ಅನುಕೂಲತೆಗಳೇನು;

ಇ) ನಿವೃತ್ತಿ ಹೊಂದಿದ ನೌಕರರಿಗೆ ಉಚಿತವಾಗಿ ಪ್ರಯಾಣಿಸಲು ಬಸ್‌ಪಾಸುಗಳನ್ನು ವಿತರಿಸಲಾಗಿದೆಯೇ;

ಈ) ಹಾಗಿಲ್ಲದಿದ್ದಲ್ಲಿ, ಬಸ್‌ಪಾಸ್ ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) 3384.

ಆ) 1) ನಗರ ಸಾರಿಗೆಯಲ್ಲಿ ಪ್ರಯಾಣಿಸಲು ಉಚಿತ ಬಸ್ ಪಾಸ್ ಸೌಲಭ್ಯವನ್ನು ನೀಡಲಾಗಿದೆ.

2) 3 ಮತ್ತು 4 ನೇ ದರ್ಜೆ ನಿವೃತ್ತ ನೌಕರರ ಆತನ/ಆಕೆಯ ಪತಿ/ಪತ್ನಿ ವರ್ಷಕ್ಕೆ 1 ಪಾಸಿನಂತೆ 5 ವರ್ಷಗಳವರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳು ಸಂಚರಿಸುವ ಯಾವುದೇ ಸ್ಥಳಗಳಿಗೆ ಪ್ರಯಾಣಿಸಲು ಪಾಸುಗಳನ್ನು ನೀಡಲಾಗುತ್ತಿದೆ.

3) ಅವರ ಅವಲಂಬಿತ ಮಕ್ಕಳಿಗೆ ಶಾಲಾ/ಕಾಲೇಜಿಗೆ ಹೋಗಿ ಬರಲು 76 ಕಿಮೀ ವರೆಗೆ ಉಚಿತ ಬಸ್ ಪಾಸ್ ನೀಡಲಾಗಿದೆ.

ಇ) ಹೌದು

ಈ) ಉದ್ಭವಿಸುವುದಿಲ್ಲ.

1915 (2465) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಗರದ ಉಪ ಸಾರಿಗೆ ಅಧಿಕಾರಿಗಳ ಕಛೇರಿಯಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ವಾಪಸ್ಸು ಕಳಿಸಲಾಗಿರುವುದರಿಂದ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಅಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ನಿಯೋಜನೆಯನ್ನು ರದ್ದುಪಡಿಸಿ ಖಾಯಂ ಸಿಬ್ಬಂದಿಯನ್ನು ನೇಮಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) ಇಲ್ಲ, ಹಿರಿಯ ಮೋಟಾರು ವಾಹನ ನಿರೀಕ್ಷಕರೊಬ್ಬರು ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿ, ಸಾಗರದಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ನಿಯೋಜನೆಯನ್ನು ರದ್ದುಗೊಳಿಸಿರುವುದಿಲ್ಲದ ಕಾರಣ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ತೊಂದರೆಯಾಗಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಜರೂರು ಕ್ರಮ ಕೈಗೊಳ್ಳಲಾಗುವುದು.

1917 (2459) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) :– ಮಾನ್ಯ ಗೃಹ, ಕಾನೂನು ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?